[ **Govt. of Karnataka** **C.R.P. 67]**

Deposition Sheets (RP.No.57) Form No.4

**IN THE COURT OF Addl. CIVIL JUDGE & J.M.F.C., KARKALA.**

**Criminal Case No. 1858/2023**

ಪಿ.ಡಬ್ಲ್ಯು : 2 ಸಿ.ಡಬ್ಲ್ಯು : 3

ಸಾಕ್ಷಿದಾರಳ ಹೆಸರು : ನೀಲಮಣಿ
ಗಂಡನ ಹೆಸರು : ಜಯಂತ ಶೆಟ್ಟಿ
ಪ್ರಾಯ : 53 ವರ್ಷ
ಉದ್ಯೋಗ : ಗೃಹಿಣಿ
ವಾಸ : ಸಂಕಲಕರಿಯ, ಮುಂಡ್ಕೂರು

ದಿನಾಂಕ 01.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರು:-

ಚಾಸಾ-1 ನನ್ನ ತಾಯಿ. ಚಾಸಾ-2 ನನ್ನ ಮಗ. ಚಾಸಾ-4 ನನ್ನ ಅತ್ತೆ. ಚಾಸಾ-5 ನಮ್ಮ ನೆರೆಕರೆಯವರು. ಸಾಕ್ಷಿಯು 1 ನೇ ಆರೋಪಿಯನ್ನು ನ್ಯಾಯಾಲಯದಲ್ಲಿ ಹಾಗೂ 2 ನೇ ಆರೋಪಿಯನ್ನು ವಿಸಿ ಮೂಲಕ ನೋಡಿ ಗುರುತಿಸಿರುತ್ತಾರೆ.

ದಿ:11.06.2023 ರಂದು ಚಾಸಾ-1 ರವರು ನೀರನ್ನು ಬೀಸಿ ಮಾಡಲು ಮನೆಯ ಹಿಂಭಾಗ ಇದ್ದ ಓಲೆಯಲ್ಲಿ ಬೆಂಕಿ ಮಾಡಲು ಹೋದಾಗ ನಮಗೆ ಚಾಸಾ-1 ರವರು ಕಳ್ಳ ಕಳ್ಳ ಎಂದು ಕೂಗುವ ಶಬ್ದ ಕೇಳಿತು. ಆಗ ನಾನು, ಚಾಸಾ-2, 4 ರವರು ಹೋಗಿ ನೋಡಿದಾಗ 1 ನೇ ಅರೋಪಿಯು ಬೈಕ್ ನಲ್ಲಿ ಇದ್ದು, 2 ನೇ ಆರೋಪಿಯು ಸರವನ್ನು ಎಳೆದು ಕಣಿವೆಯನ್ನು ದಾಟಿಹೋಗುವಾಗ ನಾವು ನೋಡಿರುತ್ತೇವೆ. ಚಾಸಾ-1 ತಾಯಿಯವರಲ್ಲಿ ವಿಚಾರಿಸಿದಾಗ 2 ನೇ ಆರೋಪಿಯು ತನ್ನ ಕುತ್ತಿಗೆಗೆ ಕೈ ಹಾಕಿ ಸರವನ್ನು ಎಳೆದುಕೊಂಡು ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ. ಅರ್ಧ ತುಂಡಾದ ಸರ ಚಾಸಾ-1 ರವರ ಕೈಯಲ್ಲಿತ್ತು ಉಳಿದ ಅರ್ಧ ಭಾಗವನ್ನು ಆರೋಪಿತರು ತೆಗೆದುಕೊಂಡು ಹೋಗಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ದಿಃ05.07.2023 ರಂದು ಪೊಲೀಸರು ಇಬ್ಬರು ಆರೋಪಿಗಳಿಗೆ ಮುಖಕ್ಕೆ ಕಪ್ಪು ಬಣ್ಣದ ಬಟ್ಟೆಯನ್ನು ಹಾಕಿ ಕರೆದುಕೊಂಡು ನಮ್ಮ ಮನೆಯ ಘಟನಾ ಸ್ಥಳಕ್ಕೆ ಬಂದಿರುತ್ತಾರೆ. ನಾವು ಆ ಸಮಯದಲ್ಲಿ ಆರೋಪಿಗಳನ್ನು ನೋಡಿರುವುದಿಲ್ಲ. ಆ ಸಮಯದಲ್ಲಿ ಪೊಲೀಸರ ಹೆಸರನ್ನು ತಿಳಿಸಿರುತ್ತಾರೆ. ಆ ದಿನ ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ತುಂಡಾದ ಸರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ-6 ರಲ್ಲಿರುವ ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು</u> ಃ 1 ನೇ ಮತ್ತು 2 ನೇ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ